# ಮನುಷ್ಯತ್ವ ಇನ್ನೂ ಉಸಿರಾಡ್ತಿದೆ...

ಕೋಳಿಮರಿಯನ್ನು ಉಳಿಸಲು ಮಿಜೋರಾಂನ ಬಾಲಕನೊಬ್ಬ ಒದ್ದಾಡಿದ ಪ್ರಸಂಗ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಮಾನವೀಯತೆ ಇನ್ನೂ ಜೀವಂತವಾಗಿದೆ ಎನ್ನಿಸುವುದು ಇಂಥ ಪ್ರಸಂಗಗಳಲ್ಲಿಯೇ!

**■ ಹೇಮಂತ್ ಕುಮಾರ್ ಎಸ್.**



ಅಪಘಾತದಲ್ಲಿ ಪ್ರಾಣ ಕಳೆದುಕೊಂಡ ಕೋಳಿಮರಿಯನ್ನು ಉಳಿಸಲು 6 ವರ್ಷದ ಬಾಲಕನೊಬ್ಬ ನಡೆಸಿದ ಪ್ರಯತ್ನ ಈಗ ಜಗತ್ತಿನ ಗಮನಸೆಳೆದಿದೆ. ಹಲವರ ಮನದಲ್ಲಿ ದೂಳು ಹೊದ್ದು ಮಲಗಿದ್ದ ಮಾನವೀಯತೆಯನ್ನು ಬಡಿದೆಬ್ಬಿಸಿದೆ. ತಲೆ ಮೇಲೆ ಬೈಸಿಕಲ್ ಹತ್ತಿದ ತಕ್ಷಣ ಪ್ರಾಣಬಿಟ್ಟ ಕೋಳಿಮರಿ, ವಿಶ್ವದ ಹಲವು ಮನಸ್ಸುಗಳಲ್ಲಿ ಬೆಚ್ಚಗೆ ಜೀವ ತಳೆದದ್ದು ಅಚ್ಚರಿಯ ಸಂಗತಿಯೇ ಸರಿ. ಸಾಮಾಜಿಕ ಮಾಧ್ಯಮಗಳಲ್ಲಿ ಈ ಚಿತ್ರ ಹಂಚಿಕೊಂಡವರು ಆಡುತ್ತಿರುವ ಮಾತುಗಳನ್ನು ಗಮನಿಸಿದರೆ, 'ನಾ ಯಾಕ್ ಹಿಂಗ್ ಆದೆ, ಯಾಕೆ ಮುಗ್ಧತೆ ಕಳೆದುಕೊಂಡೆ' ಎಂದು ಹಲುಬುತ್ತಿರುವುದು ಎದ್ದು ಕಾಣುತ್ತದೆ.

ಆದದ್ದು ಇಷ್ಟೇ. ಮಿಜೋರಾಂನ ಸಾಯಿರಂಗ್ ಎನ್ನುವ ಊರಿನಲ್ಲಿ 6 ವರ್ಷದ ಪುಟಾಣಿ ಡೆರಿಕ್ ಬೈಸಿಕಲ್ ಏರಿ ಸುತ್ತಾಡುತ್ತಿದ್ದ. ಅಚಾನಕ್ ಕೋಳಿಮರಿಯೊಂದು ಎದುರಾದಾಗ ಸೈಕಲ್ ನಿಯಂತ್ರಿಸಲು ಆಗದೆ, ಅದರ ತಲೆ ಮೇಲೆ ಚಕ್ರ ಹರಿಯಿತು. ಕೋಳಿಮರಿಯ ಸ್ಥಿತಿ ಕಂಡು ಡೆರಿಕ್‌ಗೆ ಅಯ್ಯೋಪಾಪ ಅನಿಸಿ, ಭಯದಿಂದ ಕಣ್ಣೀರು ಒತ್ತರಿಸಿತು. ಕೋಳಿಮರಿಯನ್ನು ಜೋಪಾನವಾಗಿ ಕೈಗಳಲ್ಲಿ ಹಿಡಿದು 'ಅಪ್ಪಾ...ಅಪ್ಪಾ...' ಎಂದು ಸಹಾಯಕ್ಕಾಗಿ ಗೋಗರೆದ. ಅಡಗಿಸಿಟ್ಟ ಕಾಸು ಹುಡುಕಿ, ಒಂದು ಕೈಯಲ್ಲಿ ₹10, ಮತ್ತೊಂದರಲ್ಲಿ ಕೋಳಿ ಮರಿ ಹಿಡಿದು ನೇರ ಆಸ್ಪತ್ರೆಗೆ ಓಡಿದ. ಉಸಿರು ನಿಲ್ಲಿಸಿದ್ದ ಆ ಜೀವಿಯನ್ನು ಉಳಿಸಲು ಯಾವ ವೈದ್ಯರಿಂದಲೂ ಆಗದೆಂದು ಹೇಳುವ ಧೈರ್ಯ ಪಾಲಕರಿಗೂ ಬರಲಿಲ್ಲ. ಬಿಕ್ಕಳಿಸಿ ಅಳುತ್ತಲೇ ಮನೆಯಲ್ಲಿ ಮತ್ತೆ ತಡಕಾಡಿ, ಅಪ್ಪ–ಅಮ್ಮನಲ್ಲಿ ಅಂಗಲಾಚಿ ಪುನಃ ಆಸ್ಪತ್ರೆಗೆ ಓಡಿದ. ಈ ಬಾರಿ ಪುಟಾಣಿಯ ಒಂದು ಕೈಯಲ್ಲಿ ಕೋಳಿ ಮರಿ ಮತ್ತೊಂದರಲ್ಲಿ ₹100 ಇತ್ತು.

ಹಾಂ, ಕೋಳಿಮರಿ ಉಳಿಯಲಿಲ್ಲ ನಿಜ. ಸಾವು ಎಂದರೆ ಏನು ಎಂಬುದನ್ನು ಅರ್ಥ ಮಾಡಿಸಲು ಡೆರಿಕ್‌ನ ಪಾಲಕರು ಸಾಕಷ್ಟು ಸರ್ಕಸ್ ಮಾಡಿದರು. ಆದರೆ ಈ ಘಟನೆ ಓದಿದ ಜನರು ಕಣ್ಣಾಲಿಗಳು ಮಂಜಾಗಿದ್ದು ಸಾಮಾನ್ಯ ಸಂಗತಿಯಲ್ಲ. ಸಾವಿರಾರು ಜನರು ಫೋಟೊ ಹಂಚಿಕೊಂಡು, ಲಕ್ಷಾಂತರ ಮಂದಿ ಕಾಮೆಂಟ್ ಮಾಡಿದ ಈ ಫೋಟೊ 'ಮುಗ್ಧತೆ' ಮತ್ತು ಪರಿಶುದ್ಧ ಮನಸಿನ ಮಾತುಗಳಿಗೆ ವೇದಿಕೆಯೇ ಆಗಿಹೋಯಿತು.

'ಮನುಷ್ಯನ ನಿಜವಾದ ಮುಖ ಇದು, ಪ್ರೀತಿ ಮತ್ತು ಕಾಳಜಿಯನ್ನು ನಮ್ಮೊಳಗೆ ಬೆರೆತುಕೊಂಡು ಹುಟ್ಟಿದವರು ನಾವು. ಯಾರಿಗೂ, ಯಾವುದಕ್ಕೂ ತೊಂದರೆ ನೀಡದ ಹಾಗೆ ಹಾಗೂ ದ್ವೇಷಿಸದ ಹಾಗೆ ಬದುಕಬೇಕಾದವರು... ಆದರೆ, ಈಗ್ಯಾಕೆ ಹಿಂಗ್ ಆದೆವು...?'– ಇದು ಸಾಮಾಜಿಕ ಮಾಧ್ಯಮಗಳಲ್ಲಿ ಕಮೆಂಟ್ ಮಾಡುತ್ತಿರುವ ಬಹುತೇಕರು ಕೇಳಿಕೊಳ್ಳುತ್ತಿರುವ ಪ್ರಶ್ನೆ. ಮನಸ್ಸಿನಲ್ಲಿ ಅಡಗಿದ್ದ ಮಾನವೀಯತೆಯ ಜೊತೆಜೊತೆಗೆ ಈ ಪ್ರಶ್ನೆಯನ್ನೂ ಮೇಲೆತ್ತಿದ್ದು ಪುಟಾಣಿ ಡೆರಿಕ್‌ನ ಸಾಧನೆಯೇ ಸೈ.

ಅಂದಹಾಗೆ ನಮ್ಮೆಲ್ಲರ ಮನಸ್ಸಿನಲ್ಲೂ ಒಬ್ಬ ಡೆರಿಕ್ ಇಲ್ಲವೇ? ನಮ್ಮೊಳಗಿನ ಮುಗ್ಧತೆಯನ್ನು ಬಿಟ್ಟುಬಿಡು, ಮನುಷ್ಯತ್ವವನ್ನು ಮರೆಮಾಚು, ಕರುಣೆ–ಕಾಳಜಿಗಳನ್ನು ಭದ್ರವಾಗಿ ಮುಚ್ಚಿಬಿಡು ಎಂದೆಲ್ಲ ಹೇಳಿದವರಾದರೂ ಯಾರು? ಪರಿಶುದ್ಧ ಮನಸ್ಸುಗಳಾಗಿಯೇ ಹುಟ್ಟಿದವರು ಬೆಳೆಬೆಳೆದಂತೆ ಕಲ್ಮಶಗಳನ್ನೆಲ್ಲ ಸೇರಿಸಿಕೊಂಡು ಗೋರ್ಕಲ್ಲೇ ಆಗು ಎಂದವರು ಯಾರು? ಬದಲಾಗಬೇಕು, ಬೆಳವಣಿಗೆ ಕಾಣಬೇಕು ಎಂದರೆ ಇದರೊಂದಿಗೆ ಮನುಷ್ಯತ್ವದ ಮೂಲಗುಣವನ್ನೇ ಕಳೆದುಕೊಳ್ಳಬೇಕು ಎಂದು ಯಾರು ಯಾರಿಗೆ ಹೇಳಿದರು?

ಕೈಲಿ ಕೋಳಿಮರಿ ಹಿಡಿದು, ಅದನ್ನು ಬದುಕಿಸಿಯೇ ತೀರಬೇಕು ಎನ್ನುವ ಡೆರಿಕ್‌ನನ್ನು ನೋಡಿದಾಗ ಮೂಡುವ ಪ್ರಶ್ನೆಗಳಿವು. ಈ ಪ್ರಶ್ನೆಗಳು ನಿಮ್ಮವೂ ಹೌದಲ್ಲವೇ? ■